# ರಾಜ್ಯೋತ್ಸವ ಸಿಹಿ

## ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ಆದ್ಯತೆ ಮಹತ್ವದ ವಿಧೇಯಕ ಸಿದ್ಧ । ನ.10ರ ನಂತರ ಸಭೆ

ರುದ್ರಣ್ಣ ಹರ್ತಿಕೋಟೆ ಬೆಂಗಳೂರು



ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗದ ಬೇಡಿಕೆ ಕೊನೆಗೂ ಈಡೇರುವ ಕಾಲ ಬಂದಿದೆ. ಕಳೆದ ಹಲವು ವರ್ಷಗಳ ಬೆಳವಣಿಗೆಯಿಂದಾಗಿ ಖಾಸಗಿ ವಲಯದ ಉದ್ಯೋಗ ಮರೀಚಿಕೆ ಎಂಬ ಭಾವನೆ ಮೂಡಿತ್ತಾದರೂ ಕನ್ನಡಿಗರ ನಿರೀಕ್ಷೆಯನ್ನು ವಾಸ್ತವಗೊಳಿಸುವ ನಿಟ್ಟಿನಲ್ಲಿ ಹೊಸ ಬೆಳವಣಿಗೆಗಳು ನಡೆದಿವೆ. ಈ ನಿಟ್ಟಿನಲ್ಲಿ ವಿಧೇಯಕವೂ ಸಿದ್ಧವಾಗಿದೆ.

ಕನ್ನಡ ಕಳಕಳಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೆಲವು ವರ್ಷಗಳಿಂದ ಸರ್ಕಾರದ ಮೇಲೆ ನಿರಂತರ ಒತ್ತಡ ತಂದು, ಸರೋಜಿನಿ ಮಹಿಷಿ ವರದಿ ಜಾರಿಗೆ ಪ್ರಯತ್ನ ಮಾಡಿತ್ತು. ಇದೀಗ ಅವಶ್ಯಕತೆಗೆ. ತಕ್ಕಂತೆ ವರದಿಯನ್ನು ಪರಿಷ್ಕರಿಸಿಕೊಟ್ಟಿದೆ. ಜತೆಗೆ ವಿಧೇಯಕ ಸಿದ್ಧಪಡಿಸುವುದಕ್ಕಿದ್ದ ಹಲವು ವಿಘ್ನಗಳನ್ನು ಬಗೆಹರಿಸಲಾಗಿದೆ ಎಂದು ಕಾರ್ಮಿಕ ಇಲಾಖೆಯ ಮೂಲಗಳು ಸ್ಪಷ್ಟಪಡಿಸಿವೆ.

**ಬಜೆಟ್ ಭರವಸೆ:** 2014ರಲ್ಲಿ ಸರ್ಕಾರ ರೂಪಿಸಿದ್ದ ಕೈಗಾರಿಕಾ ನೀತಿ ಹಾಗೂ 2017ರ ಬಜೆಟ್‌ನಲ್ಲಿ ಕನ್ನಡಿಗರಿಗೆ ಉದ್ಯೋಗದ ಘೋಷಣೆ ಮಾಡಲಾಗಿತ್ತು. ಆಗಿನಿಂದ ಇಲಾಖೆಗಳ ನಡುವೆ ಚರ್ಚೆಗಳು ನಡೆದಿದ್ದವು.

**ಅಧಿಸೂಚನೆ ಹಾದಿಯಲ್ಲಿ:** ಕಾರ್ಮಿಕ ಇಲಾಖೆ ಇತ್ತೀಚೆಗೆ ಕರ್ನಾಟಕ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ನಿಯಮ 1961ಕ್ಕೆ ತಿದ್ದುಪಡಿ ತಂದು ಅಧಿಸೂಚನೆ ಹೊರಡಿಸಿತ್ತು. ಆದರೆ ಅಧಿಸೂಚನೆಯಿಂದ ಉಪಯೋಗವಿಲ್ಲವೆಂಬ ಕಾರಣಕ್ಕೆ ಕಾಯ್ದೆಯನ್ನೇ ರೂಪಿಸಬೇಕೆಂದು ಒತ್ತಡ ಬಂದ ಹಿನ್ನೆಲೆಯಲ್ಲಿ ಇದೀಗ ಅಧಿಸೂಚನೆ ಹಾದಿಯಲ್ಲಿಯೇ ವಿಧೇಯಕ ಸಿದ್ಧಪಡಿಸಲಾಗಿದೆ. ಪುಟ 4

### ಕಾಯ್ದೆಯ ಅಂಶಗಳು

- ಯಾವುದೇ ಖಾಸಗಿ ವಲಯದಲ್ಲಿ ಎ ಮತ್ತು ಬಿ ಹುದ್ದೆ ಶೇ.80 ಹಾಗೂ ಸಿ ಮತ್ತು ಡಿ ಹುದ್ದೆ ಶೇ. 100 ಕನ್ನಡಿಗರಿಗೆ ಇರಬೇಕು.
- ಯಾವುದೇ ಉದ್ದಿಮೆಯಲ್ಲಿ 100 ಉದ್ಯೋಗಗಳಿಗೆ ನೇಮಕಾತಿ ನಡೆದರೆ ರಾಜ್ಯದ ಪ್ರತಿನಿಧಿ ಇರಬೇಕು
- ಯಾವುದೇ ಹುದ್ದೆಗೆ ಅರ್ಹ ಕನ್ನಡಿಗರು ಇಲ್ಲದ ಸಂದರ್ಭದಲ್ಲಿ ಮಾತ್ರ ಸರ್ಕಾರದ ಗಮನಕ್ಕೆ ತಂದು ಒಪ್ಪಿಗೆ ಪಡೆದು ಬೇರೆಯವರನ್ನು ನೇಮಕ ಮಾಡಬಹುದು
- ಸರ್ಕಾರದ ಸೌಲಭ್ಯಗಳನ್ನು ಪಡೆದ ಉದ್ದಿಮೆಗಳು 15 ವರ್ಷ ಕರ್ನಾಟಕದಲ್ಲಿ ವಾಸವಾಗಿರುವವರನ್ನು ಕನ್ನಡಿಗರೆಂದು ಪರಿಗಣಿಸಬೇಕು. ಸೌಲಭ್ಯ ಪಡೆಯದೇ ಇರುವವರು 10 ವರ್ಷ ವಾಸವಾಗಿರುವವರನ್ನು ಕನ್ನಡಿಗರೆಂದು ಪರಿಗಣಿಸಬಹುದು. ಆದರೆ ಕನ್ನಡ ಓದಲು, ಬರೆಯಲು ಬರಬೇಕು.



ಪ್ರಸ್ತುತ ಕನ್ನಡ ಭಾಷೆ, ಕನ್ನಡಿಗರ ಮೇಲೆ ಅನ್ಯಭಾಷೆಗಳ ಪ್ರಭಾವ ಬೀರುತ್ತಿದೆ. ಯಾವ ಕಾರಣಕ್ಕೂ ಕನ್ನಡದ ಬಗ್ಗೆ ನಿರ್ಲಕ್ಷ್ಯ ಧೋರಣೆಯನ್ನು ಸರ್ಕಾರ ಸಹಿಸುವುದಿಲ್ಲ. ಕನ್ನಡ ಭಾಷೆ, ಸಾಹಿತ್ಯ ದೇಶಕ್ಕೇ ಮಾದರಿ. ಕನ್ನಡ ಭಾಷೆ ಮತ್ತು ಕನ್ನಡಿಗರ ಶ್ರೇಯೋಭಿವೃದ್ಧಿಗೆ ರಾಜ್ಯ ಸರ್ಕಾರ ಪಣ ತೊಟ್ಟಿದ್ದು, ಗಡಿನಾಡು ಸೇರಿ ಎಲ್ಲ ಕನ್ನಡಿಗರನ್ನು ಒಗ್ಗೂಡಿಸುವ ಪ್ರಯತ್ನ ನಡೆದಿದೆ.

। ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ

ಸರೋಜಿನಿ ಮಹಿಷಿ ವರದಿಯನ್ವಯ ಸ್ಥಳೀಯರಿಗೆ ಉದ್ಯೋಗ ನೀಡಲು ಸರ್ಕಾರ ಬದ್ಧ. ಕಾಯ್ದೆಯಲ್ಲಿ ಕೆಲ ಅಂಶ ಸೇರಿಸುವ ಬಗ್ಗೆ ಚರ್ಚೆ ನಡೆದಿದೆ. ನೀತಿಸಂಹಿತೆ ಮುಗಿದ ನಂತರ ಜಗದೀಶ ಶೆಟ್ಟರ್ ಜತೆ ಚರ್ಚಿಸಿ ಸುಗ್ರೀವಾಜ್ಞೆ ಮೂಲಕ ಜಾರಿಮಾಡಬಹುದೇ ಎಂದು ಪರಿಶೀಲಿಸಲಾಗುತ್ತದೆ.

। ಶಿವರಾಮ ಹೆಬ್ಬಾರ್ ಕಾರ್ಮಿಕ ಸಚಿವ